# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಹೊಂಬೇಗೌಡನಗರ ಉಪವಿಭಾಗ,
ಬೃ.ಬೆಂ.ಮ.ಪಾಲಿಕೆ 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್ ಬೆಂಗಳೂರು

ಸಂಖ್ಯೆ:ಸ.ಇಂ/ವಾ-144/ವಾರ್ಡ್ ಸಭೆ/2020-21 ದಿನಾಂಕ:06/03/2021

## ವಾರ್ಡ್ -144ರ ವಾರ್ಡ್ ಸಭೆಯ ನಡವಳಿ

ದಿನಾಂಕ:06/03/2021 ರಂದು ಹೊಂಬೇಗೌಡನಗರ ಉಪವಿಭಾಗ ವಾರ್ಡ್-144ರ ವಾರ್ಡ್ ಕಛೇರಿಯಲ್ಲಿ (ದಕ್ಷಿಣ ವಲಯ) ವಾರ್ಡ್ 144-ಸಿದ್ದಾಪುರ ವಾರ್ಡ್ ಸಮಿತಿ ಸಭಾ ನಡವಳಿ.

| ಕ್ರಮ ಸಂಖ್ಯೆ | ಅಧಿಕಾರಿಯವರ ಹೆಸರು | ಪದನಾಮ/ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀ. ನರಸರಾಮರಾವ್ | ಅಧೀಕ್ಷಕ ಅಭಿಯಂತರರು (ದಕ್ಷಿಣ ವಲಯ) | ಹಾಜರಿದ್ದರು |
| 2 | ಶ್ರೀ. ಆರ್. ಕೊಟ್ರೇಶ್ ನಾಯಕ್ | ಸಹಾಯಕ ಅಭಿಯಂತರರು ವಾರ್ಡ್-144 | ಹಾಜರಿದ್ದರು |
| 3 | ಶ್ರೀ. ಚಂದ್ರಶೇಖರ್ ನಾಯಕ್ | ಕಿರಿಯ ಅಭಿಯಂತರರು Project-Central-4 | ಹಾಜರಿದ್ದರು |
| 4 | ಶ್ರೀ. ಕೆ.ಎಲ್. ನಾಗರಾಜು | ಸಹಾಯಕ ಇಂಜಿನಿಯರ್ BESCOM | ಹಾಜರಿದ್ದರು |
| 5 | ಶ್ರೀ. ಜಿ. ಮೂರ್ತಿ | ಕಿರಿಯ ಅಭಿಯಂತರರು ವಿದ್ಯುತ್ (ದಕ್ಷಿಣ) | ಹಾಜರಿದ್ದರು |
| 6 | ಶ್ರೀ. ಆರ್. ರಾಘವೇಂದ್ರ | ಕಂದಾಯ ವಸೂಲಿಗಾರರು ಹೊಂಬೇಗೌಡನಗರ ಉಪವಿಭಾಗ | ಹಾಜರಿದ್ದರು |
| 7 | ಕುಮಾರಿ. ಸುರೇಖ ಆರ್. | ಕಿರಿಯ ಆರೋಗ್ಯ ಪರಿವೀಕ್ಷಕರು ಘನತ್ಯಾಜ್ಯ ನಿರ್ವಹಣೆ | ಹಾಜರಿದ್ದರು |

| ಕ್ರಮ ಸಂಖ್ಯೆ | ಹೆಸರು | ವಿವರ | ಹಾಜರಾತಿ |
|---|---|---|---|
| 1 | ಶ್ರೀ. ಮೊಹಮ್ಮದ್ ಹುಸೇನ್ | ಮಾಜಿ ಸದಸ್ಯರು | ಹಾಜರಿದ್ದರು |
| 2 | ಶ್ರೀ. ಸಯ್ಯದ್ ಖಾಜಾ ನಿಜಾಮುದ್ದೀನ್ | ಮಾಜಿ ಸದಸ್ಯರು | ಹಾಜರಿದ್ದರು |
| 3 | ಶ್ರೀ. ಮಂಜುನಾಥ | ಸ್ಥಳೀಯರು | ಹಾಜರಿದ್ದರು |
| 4 | ಶ್ರೀ. ಮೊಹಮ್ಮದ್ | ಸ್ಥಳೀಯರು | ಹಾಜರಿದ್ದರು |
| 5 | ಶ್ರೀ. ತೇಜಸ್ ಎ. ಗೌಡ | ಸ್ಥಳೀಯರು | ಹಾಜರಿದ್ದರು |

ಮು.ತಿ.ನೋ..



Scanned with CamScanner

| ಕ್ರಮ ಸಂಖ್ಯೆ | ಹೆಸರು | ವಿವರ | ಹಾಜರಾತಿ |
|---|---|---|---|
| 6 | ಶ್ರೀಮತಿ. ಕಲ್ಯಾಣಿ | ಸ್ಥಳೀಯರು | ಹಾಜರಿದ್ದರು |
| 7 | ಶ್ರೀ. ಜಯರಾಮ್ ಎಂ.ಜಿ | ಸ್ಥಳೀಯರು | ಹಾಜರಿದ್ದರು |
| 8 | ಶ್ರೀ. ಸತೀಶ್ ಎಸ್. | ಸ್ಥಳೀಯರು | ಹಾಜರಿದ್ದರು |
| 9 | ಶ್ರೀ. ಕೆಂಪರಾಜು ಓ. | ಸ್ಥಳೀಯರು | ಹಾಜರಿದ್ದರು |
| 10 | ಶ್ರೀಮತಿ. ಸರೋಜಮ್ಮ | ಸ್ಥಳೀಯರು | ಹಾಜರಿದ್ದರು |
| 11 | ಶ್ರೀ. ಅಜ್ಮಲ್ ಖಾನ್ | ಸ್ಥಳೀಯರು | ಹಾಜರಿದ್ದರು |
| 12 | ಶ್ರೀಮತಿ. ವಿಜಯಲಕ್ಷ್ಮಿ | ಸ್ಥಳೀಯರು | ಹಾಜರಿದ್ದರು |
| 13 | ಶ್ರೀ. ಸುರೇಶ್ ಹೆಚ್.ಕೆ. | ಸ್ಥಳೀಯರು | ಹಾಜರಿದ್ದರು |
| 14 | ಬಿ.ಎಂ. ದೊರೈಸ್ವಾಮಿ | ಸ್ಥಳೀಯರು | ಹಾಜರಿದ್ದರು |

ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು/ಸದಸ್ಯರು ಮತ್ತು ಸ್ಥಳೀಯರು ಪರಸ್ಪರ ಪರಿಚಯದೊಂದಿಗೆ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು.

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ಟಿ. ಮರಿಯಪ್ಪ ರಸ್ತೆಯಲ್ಲಿ ಪ್ರಗತಿಯಲ್ಲಿರುವ ವೈಟ್ ಟಾಪಿಂಗ್ ಕಾಮಗಾರಿ ಪೂರ್ಣಗೊಂಡ ನಂತರ ರಸ್ತೆ ಉಬ್ಬನ್ನು ಹಾಕುವಂತೆ ಹಿಂದಿನ ಸಭೆಯಲ್ಲಿ ಕೋರಿರುತ್ತಾರೆ. ವಿಷಯವಾಗಿ ರಸ್ತೆ ಉಬ್ಬುಗಳನ್ನು ನಿರ್ವಹಿಸುವುದು ಪಾಲಿಕೆಯ ಟ್ರಾಫಿಲ್ ಸೆಲ್ ವಿಭಾಗದವರಿಂದ ನಿರ್ಮಿಸಲಾಗುವುದೆಂದು ಸಭೆಯಲ್ಲಿ ಹಾಜರಿದ್ದ ವೈಟ್ ಟಾಪಿಂಗ್ ಕಿರಿಯ ಅಭಿಯಂತರರು ಅಧ್ಯಕ್ಷರಿಗೆ ಮನವರಿಕೆ ಮಾಡಿದರು.
- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ಪಳೇಕಮ್ಮ ದೇವಸ್ಥಾನದ ಹತ್ತಿರ ಮಳೆಗಾಲದಲ್ಲಿ ಮಳೆನೀರು ಸರಾಗವಾಗಿ ಹರಿಯಲು ಕ್ರಮ ತೆಗೆದುಕೊಳ್ಳಲು ಹಿಂದಿನ ಸಭೆಯಲ್ಲಿ ಕೋರಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಬಿಬಿಎಂಪಿಯ ವೈಟ್ ಟಾಪಿಂಗ್ ಕಿರಿಯ ಅಭಿಯಂತರರು as per existing drain ನ ಮುಖಾಂತರ ಮಳೆನೀರು ಹರಿಯಲು ಅವಕಾಶವಿರುತ್ತದೆ ಎಂದು ಅಧ್ಯಕ್ಷರಿಗೆ ಮನವರಿಕೆ ಮಾಡಿದರು.

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ಹೋಟೆಲ್ ಮತ್ತು ಲಾಡ್ಜ್‌ಗಳಲ್ಲಿ ಕೋವಿಡ್ ಪರಿಕ್ಷೆ ನಡೆಸಲು ಕೋರಿದರು. ಆದರೆ ಅಧ್ಯಕ್ಷರು ಮಾತನಾಡಿ ಆರೋಗ್ಯ ವಿಭಾಗದವರು ಈ ಸಭೆಯಲ್ಲಿಯೂ ಸಹ ಗೈರುಹಾಜರಾಗಿರುವುದರಿಂದ ಅಧ್ಯಕ್ಷರು ದೂರವಾಣಿ ಮುಖಾಂತರ ಆರೋಗ್ಯ ವೈದ್ಯಾಧಿಕಾರಿ ಮುಖ್ಯಸ್ಥರಿಗೆ ಮಾತನಾಡಿ ಮೇಲೆ ತಿಳಿಸಿದ ಹೋಟೆಲ್ ಮತ್ತು ಲಾಡ್ಜ್‌ಗಳಲ್ಲಿ ಕೋವಿಡ್ ಪರೀಕ್ಷೆ ನಡೆಸಲು ಸೂಚಿಸಿರುತ್ತಾರೆ.

ಮು.ತಿ.ನೋ..



Scanned with CamScanner

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ವಾರ್ಡ್‌ನ ಸಿಲ್ಟ್ ಅಂಡ್ ಟ್ರ್ಯಾಕ್ಟರ್ ಬಗ್ಗೆ ವಿವರಣೆಯನ್ನು ಕೋರಿರುವ ಹಿನ್ನೆಲೆಯಲ್ಲಿ ಹಾಜರಿದ್ದ ವಾರ್ಡಿನ ಅಭಿಯಂತರರು ಸಿಲ್ಟ್ ಅಂಡ್ ಟ್ರ್ಯಾಕ್ಟರ್ ಕಾಮಗಾರಿಯು ಪೂರ್ಣಗೊಂಡಿದೆ ಎಂದು ಸಭೆಗೆ ತಿಳಿಸಿದರು.
- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ವಾರ್ಡ್ ವ್ಯಾಪತಿಯಲ್ಲಿ ಸಿ.ಸಿ. ಟಿವಿ ಅಳವಡಿಸಲು ಹಲವಾರು ಬಾರಿ ಕೋರಿರುವ ಹಿನ್ನೆಲೆಯಲ್ಲಿ ವಿದ್ಯುತ್ ವಿಭಾಗದವರು ಕಡತವು ಪ್ರಗತಿಯಲ್ಲಿದ್ದು, ಅತಿ ಜರೂರಾಗಿ Short Term Tender ಕರೆಯಲು ಕಿರಿಯ ಅಭಿಯಂತರರು (ವಿದ್ಯುತ್) ರವರಿಗೆ ಸೂಚಿಸಿದರು.
- ವಾರ್ಡ್ ಪ್ರದೇಶದಲ್ಲಿ ಹಲವಾರು ದೊಡ್ಡ ಮಳೆನೀರು ಚರಂಡಿಗಳಿದ್ದು, (SWD) ಸದರಿ ಚರಂಡಿಯನ್ನು ಹೊಂದಿಕೊಂಡಂತೆ ಹಾಗೂ ಒತ್ತುವರಿ ಮಾಡಿಕೊಂಡು ಕಟ್ಟಡಗಳು ನಿರ್ಮಾಣವಾಗಿರುವ ಬಗ್ಗೆ ಹಿಂದಿನ ಸಭೆಯಲ್ಲಿ ಸ್ಥಳೀಯರು ದೂರು ನೀಡಿದ್ದರು. ಆದರೆ ಸದರಿ ಇಲಾಖೆಯ ಅಭಿಯಂತರರು ಇಂದಿನ ಸಭೆಗೆ ಗೈರುಹಾಜರಾಗಿದ್ದು, ದೂರವಾಣಿ ಮುಖಾಂತರ ಕರೆ ಮಾಡಿ ಈ ಬಗ್ಗೆ ಕ್ರಮ ವಹಿಸುವುದಾಗಿ ಅಧ್ಯಕ್ಷರಿಗೆ ಮನವರಿಕೆ ಮಾಡಿದರು.
- ವಾರ್ಡ್ ಪ್ರದೇಶದಲ್ಲಿ ಆರೋಗ್ಯದ ಹಿತದೃಷ್ಟಿಯಿಂದ ಕೋವಿಡ್‌ಗೆ ಸಿಂಪಡಿಸಿದ ಔಷದಿಯನ್ನು ಮತ್ತೊಮ್ಮೆ ಸಿಂಪಡಿಸಲು ಸ್ಥಳೀಯರು ಹಿಂದಿನ ಸಭೆಯಲ್ಲಿ ಕೋರಿದ್ದರು. ಅದರಂತೆ ಇಂದಿನ ಸಭೆಯಲ್ಲಿ ಅಧ್ಯಕ್ಷರು ವೈದ್ಯಾಧಿಕಾರಿಯವರೊಂದಿಗೆ ದೂರವಾಣಿ ಮುಖಾಂತರ ಚರ್ಚಿಸಿ ಕೂಡಲೇ ಕೋವಿಡ್‌ಗೆ ಸಿಂಪಡಿಸಿದ ಔಷದಿಯನ್ನು ಒದಗಿಸಿದ್ದಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಸಭೆಗೆ ಅಧ್ಯಕ್ಷರು ತಿಳಿಸಿದರು.
- ವಾರ್ಡ್ ಪ್ರದೇಶದ ರಸ್ತೆಗಳ ಗುರುತನ್ನು ತಿಳಿಸಲು ಅಳವಡಿಸಲಾಗುವ ನಾಮಫಲಕಗಳಲ್ಲಿ ಸರ್ಕಾರದ ಅಧಿಸೂಚನೆಯಂತೆ ನಾಮಫಲಕವನ್ನು ಅಳವಡಿಸಲು ಹಿಂದಿನ ಸಭೆಯಲ್ಲಿ ಸ್ಥಳೀಯರು ಕೋರಿದ್ದರು. ಈ ವಿಷಯವಾಗಿ ಅಧ್ಯಕ್ಷರು ಹಾಜರಿದ್ದ ವಾರ್ಡಿನ ಅಭಿಯಂತರರಿಗೆ ಪಾಲಿಕೆಯ ನಿಯಮಾನುಸಾರ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.
- ಸೋಮೇಶ್ವರ ಕಾಲೋನಿಯ 6ನೇ ಅಡ್ಡರಸ್ತೆಯಲ್ಲಿ ನಡೆಯುತ್ತಿರುವ ಕಾಂಕ್ರಿಟ್ ಅಳವಡಿಸುವ ಕಾಮಗಾರಿಯನ್ನು ಹಾಗೂ ವಾರ್ಡಿನ ಪಾಲಿಕೆಯ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಹಿಂದಿನ ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಕೋರಿದ್ದರು. ಈ ವಿಷಯವಾಗಿ ಅಧ್ಯಕ್ಷರು ಇಂದಿನ ಸಭೆಯಲ್ಲಿ ಮಾತನಾಡಿ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ವಾರ್ಡಿನ ಅಭಿಯಂತರರಿಗೆ ತಿಳಿಸಿದರು.
- ಮರಿಯಮ್ಮ ದೇವಸ್ಥಾನದ ಸುತ್ತಮುತ್ತಲಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಒಳಚರಂಡಿ ವ್ಯವಸ್ಥೆ ಸಮರ್ಪಕವಾಗಿರುವುದಿಲ್ಲವೆಂದು ಹಿಂದಿನ ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಕೋರಿದ್ದರು. ಆದರೆ ಇಂದಿನ ಸಭೆಗೂ ಸಹ BWSSB ಇಲಾಖೆಯವರು ಗೈರುಹಾಜರಿದ್ದ ಕಾರಣ ಈ ವಿಷಯವನ್ನು ಮುಂದಿನ ಸಭೆಯಲ್ಲಿ ಚರ್ಚಿಸಲಾಗುವುದೆಂದು ಸಭೆಗೆ ತಿಳಿಸಿದರು.

ಮು.ತಿ.ನೋ..



Scanned with CamScanner

- ಪಳೇಕಮ್ಮ ದೇವಸ್ಥಾನ ಜೀರ್ಣೋದ್ಧಾರ ಮಾಡುವ ಬಗ್ಗೆ ಹಿಂದಿನ ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಕೋರಿದ್ದರು. ಈ ವಿಷಯವಾಗಿ ಸಂಬಂಧಪಟ್ಟ ಇಲಾಖೆಯವರಿಗೆ ಪತ್ರ ಬರೆಯುವಂತೆ ವಾರ್ಡ್ ಅಭಿಯಂತರರಿಗೆ ತಿಳಿಸಿದರು.

- ಬಾಸ್ಕೆಟ್ ಬಾಲ್ ಕೋರ್ಟ್‌ನ್ನು ಸಾರ್ವಜನಿಕರಿಗಾಗಿ ಅಭಿವೃದ್ಧಿ ಪಡಿಸಲು ಹಿಂದಿನ ಸಭೆಯಲ್ಲಿ ಸ್ಥಳೀಯರು ಕೋರಿದ್ದರು. ಈ ವಿಷಯವಾಗಿ ಅಧ್ಯಕ್ಷರು ಪ್ರತಿಕ್ರಿಯಿಸಿ ಈಗಾಗಲೇ ಟೆಂಡರ್ ಕರೆ ಮಾಡಲಾಗಿರುವುದಾಗಿ ಸಭೆಗೆ ತಿಳಿಸುತ್ತಾ, ಹಾಗೂ ಬಾಸ್ಕೆಟ್ ಬಾಲ್ ಕೋರ್ಟ್‌ನಲ್ಲಿ ಬಿಬಿಎಂಪಿ ಸ್ವತ್ತು ಎಂಬ ನಾಮಫಲಕವನ್ನು ಅಳವಡಿಸುವ ಕಾರ್ಯಕ್ರಮವನ್ನು ದಿ:08-03-2021 ರಂದು ಹಮ್ಮಿಕೊಳ್ಳಲು ವಾರ್ಡಿನ ಅಭಿಯಂತರರಿಗೆ ಸೂಚಿಸಿದರು.

- ಮುರಳಿ ಸ್ಲಂನಲ್ಲಿರುವ ಆರ್.ಓ. ಪ್ಲಾಂಟ್ ಸ್ಥಗಿತಗೊಂಡಿದ್ದು, ಕೂಡಲೇ ಸರಿಪಡಿಸುವಂತೆ ಹಾಗೂ ಶ್ರೀರಾಮ ದೇವಸ್ಥಾನ ಹಾಗೂ ಮರಿಯಮ್ಮ ದೇವಸ್ಥಾನದ ಹತ್ತಿರ ಇರುವ ಬೋರ್‌ವೆಲ್‌ಗಳನ್ನು ಸರಿಪಡಿಸುವಂತೆ ಹಿಂದಿನ ಸಭೆಯಲ್ಲಿ ಸ್ಥಳೀಯರು ಕೋರಿದ್ದರು. ಈ ವಿಷಯವಾಗಿ ಅಧ್ಯಕ್ಷರು ವಾರ್ಡಿನ ಅಭಿಯಂತರರಿಗೆ ಕ್ರಮ ವಹಿಸುವಂತೆ ತಿಳಿಸಿದರು.

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ವಾರ್ಡ್ ವ್ಯಾಪ್ತಿಯ ಮುಖ್ಯರಸ್ತೆಗಳಲ್ಲಿ ಅನಧಿಕೃತವಾಗಿ ನಿಂತಿರುವ ವಾಹನಗಳನ್ನು ತೆರವುಗೊಳಿಸಲು ಕೋರಿದರು. ಅದರಂತೆ ಪೊಲೀಸ್ ಸಹಾಯಕ ಆಯುಕ್ತರು (ದಕ್ಷಿಣ) ಮತ್ತು DCP (ಪಶ್ಚಿಮ) ರವರಿಗೆ ಪತ್ರ ಬರೆಯಲಾಗುವುದೆಂದು ತಿಳಿಸಿದರು.

- ವಾರ್ಡ್ ವ್ಯಾಪ್ತಿಯಲ್ಲಿ ಪೌರಕಾರ್ಮಿಕರನ್ನು ಹೆಚ್ಚಿಸಲು ಹಿಂದಿನ ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಕೋರಿದ್ದರು. ಈ ವಿಷಯವಾಗಿ ಕ್ರಮ ತೆಗೆದುಕೊಳ್ಳುವುದಾಗಿ ಸಭೆಗೆ ಅಧ್ಯಕ್ಷರು ತಿಳಿಸಿದ್ದರು. ಅದರಂತೆ ಇಂದಿನ ಸಭೆಯಲ್ಲಿ ಸದರಿ ವಿಷಯದ ಬಗ್ಗೆ ಈಗಾಗಲೇ ಪಾಲಿಕೆಯ ಮುಖ್ಯ ಕಛೇರಿಗೆ ಕಡತವನ್ನು ಸಲ್ಲಿಸಲಾಗಿದೆ ಎಂದು ಸಭೆಗೆ ಮನವರಿಕೆ ಮಾಡಿದರು.

- ವಾರ್ಡ್ ಪ್ರದೇಶದಲ್ಲಿ ಮಾಂಸ ಮಾರಾಟದ ಅಂಗಡಿಯ ಹೊರಗಡೆ ಮಾಂಸದ ಪ್ರದರ್ಶನ ಮಾಡದೆ ಅಂಗಡಿಯ ಒಳಗಡೆ ಮಾಂಸವನ್ನು ಇಟ್ಟುಕೊಂಡು ಮಾರಾಟ ಮಾಡಬೇಕೆಂದು ಹಿಂದಿನ ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಕೋರಿದ್ದರು. ಈ ವಿಷಯವನ್ನು ಸಂಬಂಧಪಟ್ಟ ಇಲಾಖೆಯವರಿಗೆ ಸೂಚನೆ ನೀಡಲಾಗುವುದೆಂದು ಅಧ್ಯಕ್ಷರು ತಿಳಿಸಿದ್ದರು. ಆದರೆ ಸಂಬಂಧಪಟ್ಟ ಇಲಾಖೆಯವರು ಗೈರುಹಾಜರಾಗಿರುವುದರಿಂದ ಮುಂದಿನ ಸಭೆಯಲ್ಲಿ ಚರ್ಚಿಸಲಾಗುವುದೆಂದು ಸಭೆಗೆ ತಿಳಿಸಿದರು.

ಮು.ತಿ.ನೋ..



Scanned with CamScanner

* ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಸುರೇಶ್ ರವರು ಮಾತನಾಡಿ ಅಭಯ ಆಸ್ಪತ್ರೆ ಹತ್ತಿರ ಮತ್ತು ದಯಾನಂದ ಸ್ಲಂನಲ್ಲಿರುವ ಆರ್.ಓ ಪ್ಲಾಂಟ್‌ಗಳು ಕೂಡಲೇ ಸಾರ್ವಜನಿಕರ ಉಪಯೋಗಕ್ಕೆ ಅನುವು ಮಾಡಿಕೊಡಬೇಕೆಂದು, ಹಾಗೂ ಸರ್ಕಾರಿ ಶಾಲೆಯ ಒಳಗಡೆ ಅಭಿವೃದ್ಧಿ ಮತ್ತು ಸೋಮೇಶ್ವರನಗರ ಕಮಾನನ್ನು ಅಭಿವೃದ್ಧಿ ಹಾಗೂ ವಾಂಬೆ ಕ್ವಾಟ್ರಸ್‌ನಲ್ಲಿರುವ ಶ್ರೀ ಮರಿಯಮ್ಮ ದೇವಸ್ಥಾನ ಅಭಿವೃದ್ಧಿ ಪಡಿಸುವಂತೆ ಕೋರಿದರು. ಅದರಂತೆ ಸಂಬಂಧಪಟ್ಟವರಿಗೆ ಈ ಬಗ್ಗೆ ತಿಳಿಸಲಾಗುವುದೆಂದು ಅಧ್ಯಕ್ಷರು ತಿಳಿಸಿದರು.
* ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಮಂಜುನಾಥ್ ರವರು ಮಾತನಾಡಿ ಈಗಾಗಲೇ ವಾರ್ಡಿನಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನೇ ಮುಂದುವರೆಸುವಂತೆ ಅಧ್ಯಕ್ಷರನ್ನು ಕೋರಿದರು. ಅದರಂತೆ ಅಧ್ಯಕ್ಷರು ಈ ವಿಷಯವನ್ನು ಚರ್ಚಿಸುವುದಾಗಿ ಸಭೆಗೆ ತಿಳಿಸಿದರು.
* ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಸಯ್ಯದ್ ರಿಯಾಜ್ ರವರು ಮಾತನಾಡಿ ನಿಮ್ಹಾನ್ಸ್ ಕಾಂಪೌಡ್ ಕಡೆ ಇರುವ ಸೋಮೇಶ್ವರನಗರದ 3ನೇ 4ನೇ ಮತ್ತು 5ನೇ ಅಡ್ಡರಸ್ತೆಯಲ್ಲಿ UGD ಕಾಮಗಾರಿಯನ್ನು ತೆಗೆದುಕೊಳ್ಳುವಂತೆ ಕೋರಿದರು. ನಿಮ್ಹಾನ್ಸ್ ಆವರಣದಲ್ಲಿ ಹಾಕಿರುವ ಕಸದಿಂದ ಅಲ್ಲಿನ ಸಾರ್ವಜನಿಕರಿಗೆ ದುರ್ವಾಸನೆ ಹರಡುತ್ತಿದ್ದು, ಅತಿ ಶೀಘ್ರವಾಗಿ ತೆರವುಗೊಳಿಸುವಂತೆ ಕೋರಿದರು ಹಾಗೂ ಸೋಮೇಶ್ವರನಗರ ಮುಖ್ಯರಸ್ತೆ 4ನೇ ಅಡ್ಡರಸ್ತೆಯಲ್ಲಿರುವ ಬೆಸ್ಕಾಂ ಇಲಾಖೆಯ ಟ್ರಾನ್ಸ್‌ಫಾರ್ಮರ್ ಅನ್ನು ಸ್ಥಳಾಂತರಿಸಲು ಕೋರಿದರು. ಸಮತಾವಾದ ಶಾಲೆ ಅಭಿವೃದ್ಧಿಪಡಿಸಲು ಹಾಗೂ ಸೋಮೇಶ್ವರ ಮುಖ್ಯರಸ್ತೆಯಲ್ಲಿರುವ ಕಮಾನನ್ನು ಅಭಿವೃದ್ಧಿ ಪಡಿಸಲು ಕೋರಿದರು. ಈ ಬಗ್ಗೆ ಅಧ್ಯಕ್ಷರು ಸಂಬಂಧಟ್ಟ ಇಲಾಖೆಯವರಿಗೆ ಕ್ರಮ ಕೈಗೊಳ್ಳುವಂತೆ ತಿಳಿಸಲಾಗುವುದೆಂದು ಸಭೆಗೆ ತಿಳಿಸಿದರು.
* ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀಮತಿ. ವಿಜಯಲಕ್ಷ್ಮಿ ರವರು ಮಾತನಾಡಿ ವಾಂಬೆ ಕ್ವಾಟ್ರಸ್ ಪ್ರದೇಶದಲ್ಲಿ ಕುಡಿಯುವ ನೀರು ಅಶುದ್ಧವಾಗಿ ಬರುತ್ತಿದೆ ಹಾಗೂ ಸದರಿ ಪ್ರದೇಶದಲ್ಲಿ ಗಾಂಜಾ ವ್ಯಸನಿಗಳು ತುಂಬಾ ಇದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಹಿನ್ನೆಲೆಯಲ್ಲಿ ಸಿ.ಸಿ. ಕ್ಯಾಮರಾ ಅಳವಡಿಸುವ ಅವಶ್ಯಕತೆ ಇರುವುದಾಗಿ ತಿಳಿಸಿದರು. ಈ ಬಗ್ಗೆ ಅಧ್ಯಕ್ಷರು ಸಂಬಂಧಟ್ಟ ಇಲಾಖೆಯವರಿಗೆ ಕ್ರಮ ಕೈಗೊಳ್ಳುವಂತೆ ತಿಳಿಸಲಾಗುವುದೆಂದು ಸಭೆಗೆ ತಿಳಿಸಿದರು.
* ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀಮತಿ. ಕಲ್ಯಾಣಿ ಮತ್ತು ಸರೋಜಮ್ಮ ರವರು ಮಾತನಾಡಿ ಹೊಸೂರು ಮುಖ್ಯರಸ್ತೆ ಹೊಂಬೇಗೌಡನ ಸ್ಲಂ ಹತ್ತಿರ ಸಾರ್ವಜನಿಕರು ರಸ್ತೆ ದಾಟಲು ಸ್ಕೈವಾಕ್ ಅಳವಡಿಸಲು ಕೋರಿದರು ಹಾಗೂ ಸದರಿ ಪ್ರದೇಶದ ಹೊಸೂರು ಮುಖ್ಯರಸ್ತೆಯಲ್ಲಿ ಇರುವ ಬಾರ್ ಮತ್ತು ವೈನ್‌ಶಾಪ್ ಅನ್ನು ತೆರವುಗೊಳಿಸುವಂತೆ ಕೋರಿದರು. ಈ ಬಗ್ಗೆ ಅಧ್ಯಕ್ಷರು ಮಾತನಾಡಿ ಸಂಬಂಧಟ್ಟ ಇಲಾಖೆಯವರಿಗೆ ಕ್ರಮ ಕೈಗೊಳ್ಳುವಂತೆ ತಿಳಿಸಲಾಗುವುದೆಂದು ಸಭೆಗೆ ತಿಳಿಸಿದರು.

ಮು.ತಿ.ನೋ..



Scanned with CamScanner

- ಸಭೆಯಲ್ಲಿ ಹಾಜರಿದ್ದ ಮಾಜಿ ಸದಸ್ಯರಾದ ಶ್ರೀ. ಖಾಜಾ ನಿಜಾಮುದ್ದೀನ್ ರವರು ಮಾತನಾಡಿ ಚೇಂಬರ್ ಮಣ್ಣನ್ನು ತೆರವುಗೊಳಿಸಲು ಈಗಾಗಲೇ ಸಾಕಷ್ಟು ಬಾರಿ BWSSB ಇಲಾಖೆಯವರು ತಿಳಿಸಿದ್ದರೂ ಸಹ ಈ ತಹಲ್‌ವರೆವಿಗೂ ತೆರವುಗೊಳಿಸಿರುವುದಿಲ್ಲ. ಸದರಿ ಪ್ರದೇಶದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಸೋಮೇಶ್ವರನಗರ ಮುಖ್ಯರಸ್ತೆಯ ಎರಡೂ ಬದಿಯಲ್ಲಿ ಅನಧಿಕೃತವಾಗಿ ನಿಂತಿರುವ ವಾಹನಗಳನ್ನು ತೆರವುಗೊಳಿಸಲು ಕೋರಿದರು. ಹಾಗೂ ಸದರಿ ಮುಖ್ಯ ರಸ್ತೆಯಲ್ಲಿ ಅಲ್ಲಲ್ಲಿ ಕಸದ ರಾಶಿಗಳು ಪ್ರತಿನಿತ್ಯ ಕಂಡು ಬರುತ್ತಿವೆ ಎಂದು ಅಧ್ಯಕ್ಷರಿಗೆ ಮನವರಿಕೆ ಮಾಡಿದರು. ಈ ಬಗ್ಗೆ ಅಧ್ಯಕ್ಷರು ಮಾತನಾಡಿ ಸಂಬಂಧಪಟ್ಟ ಇಲಾಖೆಯವರಿಗೆ ಕ್ರಮ ಕೈಗೊಳ್ಳುವಂತೆ ತಿಳಿಸಲಾಗುವುದೆಂದು ಸಭೆಗೆ ತಿಳಿಸಿದರು.
- ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಅಜ್ಮಲ್ ರವರು ಮಾತನಾಡಿ ವಾರ್ಡ್ ಕಮಿಟಿ ಸಭೆ ಪ್ರತಿ ಇಲಾಖೆಗಳಲ್ಲಿಯೂ ಸಹ ನಡೆಸಬೇಕೆಂದು ಕೋರಿದರು. ಹಾಗೂ ಘನ ಸರ್ಕಾರದ ರಾಜ್ಯ ಪತ್ರದಲ್ಲಿ ತಿಳಿಸಿರುವಂತೆ ಮತ್ತು ಪಾಲಿಕೆಯ ಶಿಷ್ಟಾಚಾರದಂತೆ ವಾರ್ಡಿನ ರಸ್ತೆಗಳಲ್ಲಿ ನಾಮಫಲಕಗಳನ್ನು ಅಳವಡಿಸಲು ಕೋರಿದರು. ಈ ಬಗ್ಗೆ ಅಧ್ಯಕ್ಷರು ಮಾತನಾಡಿ ಸಂಬಂಧಪಟ್ಟ ಇಲಾಖೆಯವರಿಗೆ ಕ್ರಮ ಕೈಗೊಳ್ಳುವಂತೆ ತಿಳಿಸಲಾಗುವುದೆಂದು ಸಭೆಗೆ ತಿಳಿಸಿದರು.
- ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಜಯರಾಂ ರವರು ಮಾತನಾಡಿ ವಿದ್ಯುತ್ ವಿಭಾಗಕ್ಕೆ ಸಂಬಂಧಿಸಿದ ಹಿಂದಿನ ಸಬೆಗಳಲ್ಲಿ ಮಾತನಾಡಿದ ಸಮಸ್ಯೆಗಳನ್ನು ಬಗೆಹರಿದಿರುವುದಿಲ್ಲ ಎಂದು ಹೇಳಿದರು. ಈ ಬಗ್ಗೆ ಅಧ್ಯಕ್ಷರು ಮಾತನಾಡಿ ವಿದ್ಯುತ್ ವಿಭಾಗದ ಕಿರಿಯ ಅಭಿಯಂತರರಿಗೆ ಕ್ರಮ ವಹಿಸಲು ಸೂಚಿಸಿದರು.
- ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಕೆಂಪರಾಜು ಓ. ರವರು ಮಾತನಾಡಿ ಸೋಮೇಶ್ವರ ಕಾಲೋನಿಯ ೯ನೇ ಮುಖ್ಯರಸ್ತೆಯಲ್ಲಿ ಬಾಗಿರುವ ವಿದ್ಯುತ್ ಕೇಬಲ್ ಹಾಗೂ ಕಂಬವನ್ನು ಸರಿಪಡಿಸಲು ಕೋರಿದರು. ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಇಂಜಿನಿಯರ್ ರವರು ಮಾತನಾಡಿ ಕೂಡಲೇ ಪರಿಹರಿಸುವುದಾಗಿ ಅಧ್ಯಕ್ಷರಿಗೆ ಮನವರಿಕೆ ಮಾಡಿದರು.
- ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಮಂಜುನಾಥ್ ರವರು ಮಾತನಾಡಿ ಪಾಲಿಕೆ ವತಿಯಿಂದ ನಿರ್ಮಿಸಿರುವ ಅಂಬೇಡ್ಕರ್ ಭವನವನ್ನು ಅಭಿವೃದ್ಧಿಪಡಿಸಿ ಮೊದಲನೇ ಅಂತಸ್ತನ್ನು ನಿರ್ಮಿಸಲು ಕೋರಿದರು. ಈ ಬಗ್ಗೆ ಅಧ್ಯಕ್ಷರು ಮಾತನಾಡಿ ವಾರ್ಡಿನ ಅಭಿಯಂತರರಿಗೆ ಈ ಬಗ್ಗೆ ಕ್ರಮ ವಹಿಸಲು ಸೂಚಿಸಿದರು.
- ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಹುಸೇನ್. ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಪೌರಕಾರ್ಮಿಕರಿಗಳೊಂದಿಗೆ ಸಾರ್ವಜನಿಕರು ಹಾಗೂ ಅಧಿಕಾರಿಗಳು ಒಟ್ಟುಗೂಡಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲು ಕೋರಿದರು. ಈ ಬಗ್ಗೆ ಅಧ್ಯಕ್ಷರು ಮಾತನಾಡಿ ಸಂಬಂಧಪಟ್ಟ ಇಲಾಖೆಯವರಿಗೆ ಕ್ರಮ ಕೈಗೊಳ್ಳುವಂತೆ ತಿಳಿಸಲಾಗುವುದೆಂದು ಸಭೆಗೆ ತಿಳಿಸಿದರು.

ಮು.ತಿ.ನೋ..



Scanned with CamScanner

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ತೇಜಸ್‌ಗೌಡ ರವರು ಮಾತನಾಡಿ ಪಾಲಿಕೆಯ ಜಾಗವಾದ ಸಮತಾವಾದ ಶಾಲೆಯ ಎ..ಸಿ. ಶೀಟಿನ ಹಳೆಯ ಕಟ್ಟಡವನ್ನು ತೆರವುಗೊಳಿಸಿ ಹೊಸ ಕಟ್ಟಡವನ್ನು ನಿರ್ಮಿಸಲು ಕೋರಿದರು. ಪಾಲಿಕೆಯ ಶಿಷ್ಟಾಚಾರದಂತೆ ರಸ್ತೆಯಲ್ಲಿ ನಾಮಫಲಕಗಳನ್ನು ಅಳವಡಿಸಲು ಕೋರಿದರು ಹಾಗೂ ಪಾಲಿಕೆಯ ಜಾಗದಲ್ಲಿ ನಿರ್ಮಿಸಿರುವ ಮಲ್ಲಿಗೆ ಆಸ್ಪತ್ರೆಯು ಭೋಗ್ಯದ ಕ್ರಮದಂತೆ ಕಾರ್ಯನಿರ್ವಹಿಸದೇ ಇರುವುದರಿಂದ ಹಿಂಪಡೆಯಲು ಕ್ರಮ ಕೈಗೊಳ್ಳಲು ಕೋರಿದರು ಈ ಬಗ್ಗೆ ಅಧ್ಯಕ್ಷರು ಮಾತನಾಡಿ ವಾರ್ಡಿನ ಅಭಿಯಂತರರಿಗೆ ಈ ಬಗ್ಗೆ ಕ್ರಮ ವಹಿಸಲು ಸೂಚಿಸಿದರು.
- ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ರಾಮಣ್ಣ ರವರು ಮಾತನಾಡಿ ಕೆ.ಹೆಚ್.ಬಿ ಕ್ವಾಟ್ರಸ್ ನಲ್ಲಿ ರಸ್ತೆಗೆ ಅಳವಡಿಸಿರುವ ಗೇಟ್ ಅನ್ನು ತೆರವುಗೊಳಿಸಲು ಮಾನ್ಯ ಅಧ್ಯಕ್ಷರಿಗೆ ಕೋರಿರುವ ಹಿನ್ನೆಲೆಯಲ್ಲಿ ಅಧ್ಯಕ್ಷರು ಮಾತನಾಡಿ ವಾರ್ಡಿನ ಅಭಿಯಂತರರಿಗೆ ಈ ಬಗ್ಗೆ ಕ್ರಮ ವಹಿಸಲು ಸೂಚಿಸಿದರು.
- ವಾರ್ಡ್ ವ್ಯಾಪ್ತಿಯ 1. ಜಾನಕಿ 2. ಕವಿತ ಕೆ. 3. ಸೆಲ್ವಿ 4. ಪುಷ್ಪರಾಣಿ 5. ಸತ್ಯ 6. ಶಾಂತಿ 7. ಯಶೋಧ 8. ಶಾಂತಮ್ಮ 9. ಸಾನಿಯಾ ಕೌಸರ್ 10. ರೆಹಮತ್ ಉನ್ನೀಸಾ ಹಾಗೂ 11. ರಾಜಣ್ಣ ವೈ ಎಂಬ 11 ಜನ ಫಲಾನುಭವಿಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು, ಅಧಿಕಾರಿಗಳು ಮತ್ತು ಸಾರ್ವಜನಿಕರು ಒಂಟಿ ಮನೆ ನಿರ್ಮಾಣಕ್ಕಾಗಿ ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡ ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

6/03/2021.

(ಆರ್. ಕೊಟ್ರೇಶ್‌ನಾಯಕ್)
ಕಾರ್ಯದರ್ಶಿ
ವಾರ್ಡ್–144 ಸಿದ್ದಾಪುರ

(ನರಸರಾಮರಾವ್) 6/3/21
ನೋಡಲ್ ಅಧಿಕಾರಿ
ವಾರ್ಡ್–144 ಸಿದ್ದಾಪುರ



Scanned with CamScanner